ಸದನ ಮತ್ತೆ 3.00 ಗಂಟೆಗೆ ಸೇರೋಣ. ಎಲ್ಲ ಸದಸ್ಯರೂ ಮಾನ್ಯ ಬಸವರಾಜ್ ಪಾಟೀಲ್ ಅನ್ವರಿಯವರ ಮನೆಗೆ ಹೋಗಿ ಬರುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, 2.30ಕ್ಕೆ ಮತ್ತೆ ಸೇರೋಣ 3.00ಕ್ಕೆ ಬೇಡ.

MR SPEAKER : I will just call Mr. Nanjegowda. As he is unwell he has sought my permission to raise this issue.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸಾರ್ ಸಿ.ಇ.ಟಿ. ಅಡ್ಮಿಷನ್ಸ್ ಈಗಾಗಲೇ ಶುರುವಾಗಿವೆ.

ಅಧ್ಯಕ್ಷರು : ನಾನು ಆ ಬಗ್ಗೆ ಸರ್ಕಾರದ ಕಡೆಯಿಂದ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ. ಈಗ ಮಾನ್ಯ ನಂಜೇಗೌಡರು ಮಾತನಾಡಲಿ. ಸರ್ಕಾರದ ಪರವಾಗಿ ಯಾರಾದರೂ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ತಾವು ನಮಗೂ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : (ತಾವು ಪ್ರಸ್ತಾಪಿಸಬೇಕೆಂದಿರುವ ವಿಷಯಕ್ಕೆ ಸಂಬಂಧಿಸಿದ ಮಾನ್ಯ ಮಂತ್ರಿಗಳು ಸದನದಲ್ಲಿ ಹಾಜರಿರದಿರುವುದನ್ನು ಗಮನಿಸಿ) : ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲದಿದ್ದರೇನಂತೆ. ನಾನು ವಿಷಯ ಪ್ರಸ್ತಾಪಿಸುತ್ತೇನೆ, ಅದು ರೆಕಾರ್ಡ್‌ಗೆ ಹೋಗಲಿ. ಮಾನ್ಯ ಮಂತ್ರಿಗಳು ಬಂದ ಮೇಲೆಯೇ ನನಗೆ ಉತ್ತರ ಕೊಡಲಿ. ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲದಿರುವುದಕ್ಕೆ ನಾವು ಜವಾಬ್ದಾರರಲ್ಲ.

ಅಧ್ಯಕ್ಷರು : ಸನ್ಮಾನ್ಯ ನಂಜೇಗೌಡರ ಆರೋಗ್ಯ ಸರಿಯಿಲ್ಲ. ಅವರು ಮೊದಲೇ ನನಗೆ ಫೋನ್ ಮಾಡಿ ಈ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೇಳಿದ್ದಾರೆ. ನಾವು ಈಗ 1.30ರವರೆಗೆ ಕುಳಿತುಕೊಂಡು ಎಷ್ಟು ಆಗುತ್ತದೋ ಅಷ್ಟು ವಿಷಯವನ್ನು ಕವರ್ ಮಾಡೋಣ. ಉಳಿದದ್ದನ್ನು ಭೋಜನ ವಿರಾಮದ ನಂತರ ಮಂದುವರೆಸೋಣ. ದಯಮಾಡಿ ಎಲ್ಲ ಸದಸ್ಯರೂ ಸಹಕರಿಸಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ವಿಷಯಗಳು

ದೇವನಹಳ್ಳಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ ಈ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಮಾನ್ಯ ದೇಶಪಾಂಡೆಯವರು ಪದೇಪದೇ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇತ್ತೀಚೆಗೆ ಅವರ ಹೇಳಿಕೆಗಳ ಬಗ್ಗೆ ಎರಡು ತಲೆ ಬರಹ ಪತ್ರಕೆಗಳಲ್ಲಿ ಬಂದಿದೆ.

ಡೆಕ್ಕನ್ ಹೆರಾಲ್ಡ್‌ನಲ್ಲಿ ಮಾನ್ಯ ಮಂತ್ರಿಗಳ ಹೇಳಿಕೆ "Deshpande lamblast the Centre on International Airport". ಎಂದು ಬಂದಿದೆ. ನಾನು ಕೇಂದ್ರ ಸರ್ಕಾರದ ಪರವಾಗಿ ವಕಾಲತ್ತನ್ನು ವಹಿಸಲು ಇಲ್ಲಿ ನಿಂತುಕೊಂಡಿಲ್ಲ. ಅದೇ ರೀತಿ ಕನ್ನಡ ಪ್ರಭದಲ್ಲಿ "ವಿದೇಶಕ್ಕೆ ಹೋಗಿ ಎಷ್ಟು ಸುಳ್ಳು ಹೇಳಲಿ" ಎಂಬ ಮಾನ್ಯ ಮಂತ್ರಿಗಳ ಹೇಳಿಕೆಯೂ ಪ್ರಕಟವಾಯಿತು. (ಈ ಹಂತದಲ್ಲಿ ಮಾನ್ಯ ದೇಶಪಾಂಡೆಯವರು ಸದನಕ್ಕೆ ಆಗಮಿಸಿದರು) ಮಾನ್ಯ ದೇಶಪಾಂಡೆಯವರು ಹೊರ ದೇಶಕ್ಕೆ ಹೋಗಿ ಸುಳ್ಳು ಹೇಳುತ್ತೇನೆ ಅಂತಲಾದರೂ ಒಪ್ಪಿಕೊಂಡಿರುತ್ತಾರೆ. ನನ್ನ ವಿನಂತಿ ಏನೆಂದರೆ, ಸುಳ್ಳು ಹೇಳುವ ಬಹುತೇಕ ಮಂತ್ರಿಗಳು ಇದ್ದಾರೆ, ಅವರ್‍ಯಾರೂ ಸುಳ್ಳು ಹೇಳಬಾರದು. ಮಾನ್ಯ ಸಿಂಧ್ಯಾರವರೇ, ಮಾನ್ಯ ದೇಶಪಾಂಡೆಯವರು ವಿದೇಶಕ್ಕೆ ಹೋಗಿ ಎಷ್ಟು ಸುಳ್ಳು ಹೇಳಿ ಬರಲಿ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಅನೇಕರು ಸುಳ್ಳು ಹೇಳುತ್ತಾರೆ, ಅವರೂ ಕೂಡ ಸುಳ್ಳುಗಳನ್ನು ಹೇಳಬಾರದು ಎಂದು ನಾನು ಹೇಳುತ್ತಿದ್ದೇನೆ. ನಾನು ಸುಳ್ಳು ಹೇಳುತ್ತೇನೆ ಎಂದು ಮಾನ್ಯ ದೇಶಪಾಂಡೆಯವರೇ ಒಪ್ಪಿಕೊಂಡಿದ್ದಾರೆ. ಅದು ಪತ್ರಿಕೆಯಲ್ಲೂ ಬಂದಿದೆ. ಅದನ್ನು ನಾನೇನು ಹೊಸದಾಗಿ ಹೇಳುತ್ತಿಲ್ಲ. ಅವರ ಮಾತನ್ನೇ ನಾನು ಕೋಟ್ ಮಾಡುತ್ತಿದ್ದೇನೆ. ಈ ಸಭೆಗಂತೂ ಸರ್ಕಾರ ಸರಿಯಾದ ಮಾಹಿತಿ ಕೊಡಲೇಬೇಕು. ಇಲ್ಲಿ ಸತ್ಯಕ್ಕೆ ದೂರವಾದಂತಹ ಸಂಗತಿಯನ್ನು ಸರ್ಕಾರ ಹೇಳಕೂಡದು. ಮಾನ್ಯ ದೇಶಪಾಂಡೆಯವರೇ ತಾವು ಆಮೇಲೆ ಉತ್ತರ ಕೊಡಿ, ನಾನು ಮೊದಲು ನನ್ನ ಅನಿಸಿಕೆಗಳನ್ನು ಹೇಳಿಬಿಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು : ಮಾನ್ಯ ಗೌರವಾನ್ವಿತ ಸದಸ್ಯರು ಬಹಳ ಹಿರಿಯರಿದ್ದಾರೆ. ನಾವು ಏರ್‌ಪೋರ್ಟ್ ಬಗ್ಗೆ ಹಲವಾರು ಬಾರಿ ಇಲ್ಲಿ ಚರ್ಚೆ ಮಾಡಿದ್ದೇವೆ. ನಾವು ಪ್ರಶ್ನೆ ರೂಪದಲ್ಲಿ ಅದು ಪ್ರಸ್ತಾಪವಾದಾಗ ಅದಕ್ಕೆ ಉತ್ತರ ಕೊಟ್ಟಿದ್ದೇವೆ. ಹಲವಾರು ಬಾರಿ ಚರ್ಚೆಯಲ್ಲಿ ಭಾಗವಹಿಸಿ ಉತ್ತರ ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾವ ಮಾಡುತ್ತಿದ್ದಾರೆ. I think he is raising in zero hour. I want to know that is that urgent importance which has made the hon.Member to raise this issue. our stand is very clear regarding Airprot. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಖಿರ್ಗೆಯವರು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಾಗ, ಆ ಸಮಯದಲ್ಲಿ you decided that we should have a International Airport. You floted tender.

ಶ್ರೀ ಎಂ. ವೀರಪ್ಪ ಮೊಯ್ಲಿ : ಆಗ ನಾವು ಸೈನ್ ಹಾಕಿ ಬಿಟ್ಟಿದ್ದರೆ ಬಹುಶಃ ಈ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಇನ್ನೊಂದು ವರ್ಷದಲ್ಲಿ ಆಗೇ ಬಿಡುತ್ತಿತ್ತು. ಆದರೆ ನಾನು as a matter of propriety ನನ್ನ ಸಕ್ಸಸರ್ ಗೌರ್ನಮೆಂಟ್ ಮಾಡಲಿ ಎಂದು ಬಿಟ್ಟಿದ್ದೇ ತಪ್ಪಾಯಿತು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ದೇವೇಗೌಡರ ಸಚಿವ ಸಂಪುಟವು ಇದನ್ನು 15 ದಿವಸಗಳೊಳಗಾಗಿ ಕ್ಲಿಯರ್ ಮಾಡಿತು. ಎಕ್ಸ್‌ಪರ್ಟ್ ಕಮಿಟಿ ರೆಕ್ಕಂಡೇಷನ್ ಯಾರ ಫೇವರ್‌ನಲ್ಲಿ

ಬಂದಿತ್ತು? ಸಿವಿಲ್ ಏವಿಯೇಷನ್‌ನಲ್ಲಿ ಅವರು ಯಾರ್‍ಯಾರನ್ನು ನೋಡಿಲ್ಲ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ within 15 days he cleared it. ನಮ್ಮ ಕಡೆ ನಾವು ಇಟ್ಟು ಕೊಂಡಿಲ್ಲ. Letter of intent was also issued. ನಮ್ಮ ಸರ್ಕಾರ ಇದ್ದಾಗ ಆಗಲೀ ಅಥವಾ ನಿಮ್ಮ ಸರ್ಕಾರ ಇದ್ದಾಗ ಆಗಲೀ ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. There is total clarity. You have also written to the Prime Minister recently that you please clear it. None of the Opposition Members also come in the way, ಈ ಬಗ್ಗೆ ಭಾರತ ಸರ್ಕಾರದ ಕಡೆ ನಾವು ಸಾಕಷ್ಟು ಸಲ ಹೋಗಿ ಬಂದಿದ್ದೇವೆ. ಇಲ್ಲಿ ಪ್ರಶ್ನೆ ಏನಿದೆ ಅಂದರೆ now the Government of India says new Aviation Policy is coming. There is total private participation. Please wait till then. ಎಂದು ಹೇಳಿದ್ದಾರೆ ಹಾಗಿರುವಾಗ I would like to know what that urgency which has made the member to raise this issue in zero hour. There are so many rules and prodcedure.

ಶ್ರೀ ಹೆಚ್.ಎನ್. ನಂಜೇಗೌಡ : ಅಧ್ಯಕ್ಷರೆ, I will tell the urgency, ಈ ಬಗ್ಗೆ ನಮ್ಮ ಕಾತುರ ಏಕೆ ಎಂದರೆ, ಸಾರ್ ಇದರಲ್ಲಿ ಎರಡು ರೀತಿ ಇದೆ. ಬಿಲ್ಡ್, ಓನ್ ಅಂಡ್ ಟ್ರಾನ್ಸ್ಫರ್ ಎಂದು ಒಂದು. ಬಿಲ್ಡ್, ಓನ್ ಅಂಡ್ ಆಪರೇಟ್ ಎಂದು ಇನ್ನೊಂದು ರೀತಿ ಇದೆ. ಬಿಲ್ಡ್, ಓನ್ ಅಂಡ್ ಆಪರೇಟ್ ಎಂದರೆ ದಾನ ಕೊಟ್ಟ ಲೆಕ್ಕದಂತೆ. ಈ ಬಗ್ಗೆ ನಾನು ಇಲ್ಲಿ ಎಲ್ಲಾ ವಿಷಯ ಹೇಳುತ್ತೇನೆ. ಇದು ಕೋರ್ಟ್‌ಗೆಲ್ಲಾ ಹೋಗಿದೆ. ಕೋರ್ಟ್ ಆರ್ಡರ್ ಏನಿದೆ ಎಂಬುದನ್ನೂ ಕೂಡ ನಾನು ಓದುತ್ತೇನೆ. ಕೆಲವು ಮಾಹಿತಿಯನ್ನು ನೀವು ಮುಚ್ಚಿಡುತ್ತಿದ್ದೀರಿ. ವಿಮಾನ ನಿಲ್ದಾಣ ಸ್ಥಾಪನೆಗೆ ನಿಮಗ್ಯಾಕೆ ಇಷ್ಟು ಆತುರ? ಕೋರ್ಟ್ ಆರ್ಡರ್ ಏನಿದೆ ಎಂಬುದನ್ನು ಹಾಗೂ ಮತ್ಯಾವುದೇ ಇನಸ್ಟ್ರಕ್ಷನ್ ಏನಿದೆ ಎಂಬುದನ್ನು ನೀವು ಸದನದ ಗಮನಕ್ಕೆ ತರದೇ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಂಡು ಬಿಟ್ಟರೆ ಬೆಂಗಳೂರಿನ ಜನ ನಿಮಗೆ ಶಾಪ ಹಾಕುತ್ತಾರೆ. ಯಾರ್‍ಯಾರು ಏರ್‌ಪೋರ್ಟ ಮಾಡಲಿಕ್ಕೆ ಕಾರಣಕರ್ತರಾಗುತ್ತಾರೋ ಅವರ ಸಂತತಿಗೆಲ್ಲಾ ಜನ ಶಾಪ ಹಾಕುತ್ತಾರೆ. ಏಕೆಂದರೆ, ಅರ್ಕಾವತಿ ನೀರು ಪಲ್ಯೂಟ್ ಆಗುತ್ತದೆ. ಅದರ ಬಗ್ಗೆ ನಾನು ಹೇಳುತ್ತೇನೆ. ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಸರ್ಕಾರ ಪ್ರತಿಷ್ಠೆ ಮೇಲೆ ನಿಲ್ಲದೇ ಇರುವ ಸಂಗತಿಯನ್ನು ಒಪ್ಪಿಕೊಳ್ಳಬೇಕು. ಟಾಟಾ ಕನ್ಸ್‌ಲ್ಟೆನ್ಸಿಗೆ ತುರ್ತಾಗಿ ಈ ಏರ್‌ಪೋರ್ಟ್‌ನ್ನು ದಾನ ಕೊಡಲು ನೀವು ತುದಿಗಾಲಲ್ಲಿ ನಿಂತಿದ್ದೀರಿ. ಈಗಿರುವ ವಿಮಾನ ನಿಲ್ದಾಣದಲ್ಲಿ ಇಂಟರ್‌ನ್ಯಾಷನಲ್ ಫ್ಲೈಟ್ಸ್ ಇಳಿಯುವುದಕ್ಕಾಗುವುದಿಲ್ಲವೇ? ಹೀಥ್ರೂ ಏರ್‌ಪೋರ್ಟ್ ಎಷ್ಟು ಏಕರೆ ಇದೆ? Frankfurt ಏರ್‌ಪೋರ್ಟ್ ಎಷ್ಟು ಎಕರೆ ಇದೆ? ಹಾಂಕಾಂಗ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಎಷ್ಟು ಎಕರೆ ಇದೆ? ನೀವು ಬಿಲ್ಡ್ ; ಓನ್ ಅಂಡ್ ಟ್ರಾನ್ಸ್ಫರ್ ಎನ್ನುವುದಕ್ಕೆ ಕೊಟೇಷನ್ ಏಕೆ ಕರೆಯುವುದಿಲ್ಲ? ಜರ್ಮನಿ ಕಂಪನಿಗಳು, ಮಲೇಶಿಯನ್ ಕಂಪನಿಗಳು ಈ ರೀತಿ ಮಾಡುವುದಕ್ಕೆ ತಯಾರಾಗಿರಲಿಲ್ಲವೇ? ನಾನು ಈ ಬಗ್ಗೆ ಒಂದು ಕೇಸ್ ಹಾಕಿದ್ದೆ. ಅದ ಸುಪ್ರೀಂಕೋರ್ಟ್‌ನವರೆಗೆ ಹೋಗಿದೆ. ಈ ಬಗ್ಗೆ ಸುಪ್ರೀಂಕೋರ್ಟ್ ಎರಡು ಆರ್ಡರ್ ಕೊಟ್ಟಿದೆ. ನಾನೇ ಇದಕ್ಕೆ ಮೈನ್ ಪಿಟೀಷನರ್. ಒಂದು ಆರ್ಡರ್ ಆದಮೇಲೆ

ಒಂದು ಇಂಟರಿಮ್ ಅಪ್ಲಿಕೇಷನ್ ಬೇರೆ ಕೊಟ್ಟಿದ್ದಾರೆ. ಸರ್ಕಾರದವರು ಮತ್ತು ಟಾಟಾ ಕನ್ಸಲ್ಟೆನ್ಸಿ ಇಬ್ಬರೂ ಸೇರಿ ಇದನ್ನು ಸಲ್ಲಿಸಿದ್ದಾರೆ. ಮೈನ್ ಆರ್ಡರ್ ಏನು ಹೇಳುತ್ತದೆ? ನಮ್ಮ ಅಪ್ಲಿಕೇಷನ್ ಅನ್ನು ಸುಪ್ರೀಂಕೋರ್ಟ್ ಡಿಸ್ಪೋಸ್ ಮಾಡಬೇಕಾದರೆ ಏನು ಹೇಳಿತು? ಮಾನ್ಯ ಅಧ್ಯಕ್ಷರ ಕ್ಷಮೆ ಕೇಳಿ ಕೋರ್ಟ್ ಆದೇಶದ ಒಂದು ಪ್ಯಾರಾವನ್ನು ಇಲ್ಲಿ ಓದಿ ಬಿಡುತ್ತೇನೆ. "It has been submitted before us by the learned Additional Solicitor-General, appearing for the Industrial Development Board i.e., Respondent No.3 and the Learned Advocate General of the State of Karnataka appearing for the State of Karnataka, Respondent No.1, that the State Government and the State Pollution Control Board are require to examine the project before it is estiblished in terms of Sections 19 and 21 of the Air and Prevention and Control of Pollution and Sections 19 and 25 of the Water Prevention and Pollution Act, 1974 and these authorities will satisfy themselves on the requirement of both these enactments within a period of 10 weeks from today. We don't think that no further order need to be passed on this application. However, we make it clear that the State Government should not do or authorise any act in relation to the land in question which shall be inconsistent with the sequence of the Forest Conservation Act, 1990, wherever the State Act, is applicable in respect of the land proposed. ಇದರ ಅರ್ಥ ಏನೆಂದರೆ 10 ವಾರದಲ್ಲಿ ಪೊಲ್ಯೂಷನ್ ಕಂಟ್ರೋಲ್‌ನವರು ಇದನ್ನೆಲ್ಲ ಎಕ್ಸಾಮಿನ್ ಮಾಡಬೇಕಾಗಿತ್ತು. ಇದು ಇಷ್ಟರವರೆಗೆ ಆಗಿಲ್ಲ. ಇದಕ್ಕೆ ಸಮಯಾವಕಾಶ ಕೇಳಿದರು ಸಮಯಾವಕಾಶ ಕೇಳಿದ ಮೇಲೆ ಐ.ಎ. ಅಪ್ಲಿಕೇಷನ್ ಮೇಲೆ ಕೋರ್ಟ್ ಇನ್ನೊಂದು ಆರ್ಡರ್ ಮಾಡಿತು. ಇನ್ನಾದರೂ ಕೋರ್ಟಿಗೆ ಸರಿಯಾದ ಮಾಹಿತಿ ಕೊಟ್ಟಿದ್ದಾರೋ ಇಲ್ಲವೋ ಅದರ ಬಗ್ಗೆ ನನಗೆ ಅನುಮಾನವಿದೆ. ಈ ಪತ್ರವನ್ನು ಚೀಫ್ ಸೆಕ್ರೆಟರಿಯವರಿಗೆ ಬರೆದಿದ್ದಾರೆ.

SRI R.V. DESHPANDE : I would like to know from the hon'ble Member as to what he wants to make out. Whether he wants to make out ದೇವನಹಳ್ಳಿಯಲ್ಲಿ ವಿಮಾನನಿಲ್ದಾಣ ಮಾಡಬೇಕೆಂದು ಹೇಳುತ್ತೀರೋ, ಬಿಡದಿಯಲ್ಲಿ ಮಾಡಬೇಕೆಂದು ಹೇಳುತ್ತೀರೋ, ಎಲ್ಲಿ ವಿಮಾನನಿಲ್ದಾಣವನ್ನು ಮಾಡಬೇಕೆಂದು ಹೇಳುತ್ತೀರೋ ಅದನ್ನು ಸ್ಪಷ್ಟವಾಗಿ ಹೇಳಿ. You have gone before the court also and your writ has been dismissed.

SRI. H.N. NANJEGOWDA : It is not dismissed.

(INTERRUPTIONS)

SRI. R.V. DESHPANDE : I know. You may not be knowing. You please enlighten me as to what you want. As far as Ecology and Environment is

concerned, I have clearly said that the project will be cleared only after getting clearance from the Ecology and Environment Department. I have made it clear. I have not said that we have taken clearance from them. We have, so far, not given even an inch of land of land to TATAs. I want to know from the hon'ble Member clearly what he wants. Whether he wants that the international airport should come or it should not come in Bangalore. Or whether he wants that it should go to Bidadi; because there are so many people who have helped in delaying this project. I have not come to the House...

(INTERRUPTONS)

SIR M. MALLIKARJUN KHARGE : Sir, I request you to take it up for discussion instead of Zero hour and state date and time so that we can also participate in the discussion. Because the Hon'ble Member Sri H.N. Nanjegowda is quoting court cases and operative portion of the court order. We cannot discuss off hand.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ನಾನು ಯಾವಾಗಲೂ ಸಿದ್ದನಿದ್ದೇನೆ. ನಮ್ಮ ಸರ್ಕಾರ ಸಹ ಡಿಸ್‌ಕಶನ್‌ನಲ್ಲಿ ಬಾಗಿಯಾಗುವುದಕ್ಕೆ ಇಚ್ಛೆಪಡುತ್ತದೆ. ಅವರು ಹೇಳಿದರು ಟೆಂಡರ್ ಮಾಡಿಲ್ಲವೆಂದು. ಅವರು ಚೀಫ್ ಮಿನಿಸ್ಟರ್ ಆಗಿದ್ದಾಗ ಗ್ಲೋಬಲ್ ಟೆಂಡರ್ ಮಾಡಿದ್ದಾರೆ. I would like to enlighten the Member that they have called global tenders. ಯಾವ ಮಲೇಶಿಯನ್ ಕಂಪನಿಯನ್ನು ಕರೆದುಕೊಂಡು ಬರಲಿ ನಾನು? ಯಾರೋ ಮಲೇಶಿಯನ್ ಕಂಪನಿಯನ್ನು ಭೇಟಿ ಆಗಿ ಬಂದಿರಬಹುದು. ನಮ್ಮನ್ನು ಯಾವ ಮಲೇಶಿಯನ್ ಕಂಪನಿಗಳೂ ಸಹ ಬಂದು ಭೇಟಿ ಆಗಿಲ್ಲ. ಯಾರಿಗೋ ಮಲೇಶಿಯನ್ ಕಂಪನಿಯವರು ಭೇಟಿ ಆಗುವುದಕ್ಕೆ ಬಂದಿರಬಹುದು.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಭಾರತ ದೇಶದಿಂದ ಬೇರೆ ಯಾವುದೇ ದೇಶಕ್ಕೆ ಹೋಗಿಲ್ಲ.

(ಗೊಂದಲ)

SRI. R.V. DESHPANDE : I am prepared for discussion in any form.

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಸಮಗ್ರವಾಗಿ ಚರ್ಚೆ ಆಗಲಿ. ಇದು ಚರ್ಚೆ ಆಗಲೇ ಬೇಕಾದ ವಿಷಯವಾಗಿದೆ.

MR. SPEAKER : All right. We will take up this for a detailed discussion under a different rule.

SRI R.V. DESHPANDE : Sir, the international airport is coming here and so many investors are also coming here and they are investing money.

(INTERRUPTIONS)

If we discuss like this it will send a wrong signal.

ಶ್ರೀ ಹೆಚ್.ಎನ್. ನಂಜೇಗೌಡ : ಇಂಟರ್‌ನ್ಯಾಷನಲ್ ಇಂಡಸ್ಟ್ರೀಯಲಿಸ್ಟ್ಸ್ ಯಾರೂ ಸಹ ಈ ರಾಂಗ್ ಸಿಗ್ನಲ್ ತೆಗೆದುಕೊಳ್ಳುವುದಿಲ್ಲ. ದೇವನಹಳ್ಳಿ ಸುತ್ತಾ ಯಾರು ಡೆವಲಪರ್ಸ್ ಹತ್ತಾರು ಸಾವಿರ ಎಕರೆ ಜಮೀನು ತೆಗೆದುಕೊಂಡಿದ್ದಾರೆ ಅವರಿಗೆ ರಾಂಗ್ ಸಿಗ್ನಲ್ ಹೋಗುತ್ತದೆ. ರೇಟ್ ಡೌನ್ ಆಗುತ್ತದೆ ಅಷ್ಟೆ. ಇದು ನನಗೆಲ್ಲ ಗೊತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ನಂಜೇಗೌಡರೇ, ಬಿಡದಿಯಲ್ಲಿ ಜಮೀನು ರೇಟ್ ಹೆಚ್ಚಾಗುತ್ತದೋ, ದೇವನಹಳ್ಳಿಯಲ್ಲಿ ರೇಟ್ ಹೆಚ್ಚಾಗುತ್ತದೋ ಅಥವಾ ಇನ್ನೊಂದು ಕಡೆ ರೇಟ್ ಹೆಚ್ಚಾಗುತ್ತದೋ ಅದೆಲ್ಲಾ ನನಗೆ ಗೊತ್ತಿದೆ. ಈಗ ಗವರ್ನ್‌ಮೆಂಟ್ ಸ್ಟ್ಯಾಂಡ್‌ನಲ್ಲಿ ಏನಾದರೂ ಬದಲಾವಣೆಗಳು ಇದ್ದರೆ ನೀವು ಚಾಲೆಂಜ್ ಮಾಡಿ. ಸೈಟ್‌ನ್ನು ನಾವು ಸೆಲೆಕ್ಟ್ ಮಾಡಿಲ್ಲ. The Ramanathan Committee was appointed by the Government of India. The site was selected by them. Where are we in picture? The question of increase or decrease in the value of land prices does not arise on our statement here. But, there are some people who feel that rates of land will increase at Devanahalli.

SRI. H.N. NANJEGOWDA : Take the opinion of the experts about the pollution caused to Arkavathi river because one-third of the population of the City are drinking water of this river. After 15 years it has become sewage water. They will curse you. ಅವರು ಶಾಪ ಹಾಕುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಜನ ಶಾಪ ಹಾಕಿದಾಗ ತೆಗೆದುಕೊಳ್ಳೋಣ. ನಾವು ಪಾಪ ಮಾಡಿದರೆ ಶಾಪ ತೆಗೆದುಕೊಳ್ಳಬೇಕಾಗುತ್ತದೆ. This project has to be cleared by the Ecology and Environment Department. Otherwise, it is not possible. I have made it clear. There, the point of Hon'ble Member is already met there. But, ಇವರು ಇಲ್ಲಿ ಏನೇನೋ ಕಲ್ಪನೆ ಮಾಡಿಕೊಂಡು ಮಾತನಾಡಿದರೆ ಅದಕ್ಕೆ ನಾನು ಜವಾಬ್ದಾರನಲ್ಲ.

MR. SPEAKER : Furthere, more as the senior Member Hon'ble Sri Veerappa Moily and the leader of the Opposition have suggested that we can

take up this matter under a different rule, we can do so as they desired. We will take it up under a different rule for a detailed discussion.

Now, the House stands adjourned to meet at 2.30 P.M.

(ಸಭೆಯು ಭೋಜನ ವಿರಾಮದ ನಂತರ 3-10 ಗಂಟೆಗೆ ಸಮಾವೇಶಗೊಂಡಿತು.)

(ಸನ್ಮಾನ್ಯ ಉಪಾಧ್ಯಕ್ಷರಾದ ಚಂದ್ರಶೇಖರ್ ಮಾಮನಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಕಟಣೆ

ಉಪಾಧ್ಯಕ್ಷರು : ನಾಳೆ 14ನೇ ತಾರೀಖು ಅಧಿವೇಶನ ಇರುವುದಿಲ್ಲ ಮತ್ತು 14 ನೇ ತಾರೀಖು ರಾತ್ರಿ ಈ ಮೊದಲು ನಿರ್ಣಯಿಸಿದಂತ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ. ಕೇಂದ್ರ ಸರಕಾರ ಮತ್ತು ಮಾನವ ಸಂಪನ್ಮೂಲ ಮಂತ್ರಿಗಳ ಆದೇಶದಂತೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ. ಜಂಟಿ ಅಧಿವೇಶನವನ್ನು ರದ್ದುಪಡಿಸಲಾಗಿದೆ. ಈಗ ಶೂನ್ಯ ವೇಳೆ ಶೂನ್ಯವೇಳೆಯಲ್ಲಿನ ಪ್ರಸ್ತಾವನೆಯನ್ನು ಪ್ರತಿಯೊಬ್ಬರೂ ಎರಡು ನಿಮಿಷಗಳಲ್ಲಿ ಮುಗಿಸಿ ದಯವಿಟ್ಟು ಸಹಕರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರುವುದೇನೆಂದರೆ ಸದನದಲ್ಲಿ ಯಾರೂ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಉಪಾಧ್ಯಕ್ಷರು : ಸರಕಾರದ ಪರವಾಗಿ ಮಾನ್ಯ ಸಿಂಧ್ಯಾರವರು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯಾರವರು ಇದ್ದಾರೆ. ಆದರೆ ಅವರು ಹಿಂದಿನ ಸರಕಾರದಲ್ಲಿದ್ದಷ್ಟು ಈಗ ಸಮೀಪ ಇಲ್ಲ.

ಉಪಾಧ್ಯಕ್ಷರು : ಹಿಂದಿನ ಸರಕಾರ ಬೇರೆ, ಈಗಿನ ಸರಕಾರ ಬೇರೆ ಎಂದು ಇಲ್ಲ. ಒಂದೇ ಸರಕಾರ ಇರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಇಲ್ಲಿ ಇಲ್ಲದಿದ್ದವರು ಸಿಂಧ್ಯಾರವರಿಗೆ ವಿಷಯಗಳನ್ನು ನೋಡಿಕೊಳ್ಳಿ ಎಂದು ಹೇಳಿ ಹೋಗಬೇಕಲ್ಲ? ನಮ್ಮ ಪರವಾಗಿ ನೋಡಿಕೊಳ್ಳಿ ಎಂದು ಹೇಳಬೇಕಲ್ಲ? ಅಥವಾ ಇವರು ಹೋಗಿ ಅವರನ್ನು ಕೇಳುವುದು ಮುಂತಾಗಿ ಇದ್ದರೆ ಚೆನ್ನಾಗಿರುತ್ತದೆ. ಅವರ ಸಮೀಪ ಇರುವ ಅವರ ಹಿಂದಿನವರು ಇಲ್ಲ, ಹೋಂ ಮಿನಿಸ್ಟರ್ ಕೂಡ ಇಲ್ಲ.

ಶ್ರೀ ಪಿ.ಜಿ. ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಇದು ಬಹಳ ತಪ್ಪು ಕಲ್ಪನೆಯನ್ನು ಜನರಲ್ಲಿ ಮೂಡಿಸುತ್ತದೆ. ಮಂತ್ರಿಮಂಡಲದಲ್ಲಿ ಅಥವಾ ಮಂತ್ರಿಗಳಲ್ಲಿ, ನಮ್ಮಲ್ಲಿ ಯಾವುದೇ ರೀತಿಯ